ಓ.ಎಸ್. ನಂಃ **17/2022**
<u>ಪಿಡಬ್ಲ್ಯೂಃ **1**</u>

ಸಾಕ್ಷಿಗೆ ತೆಲುಗು ಭಾಷೆ ಬರುತ್ತದೆ ಕನ್ನಡ ಭಾಷೆ ಬರುವುದಿಲ್ಲ ಎಂದು ಹೇಳಿದ ಮೇರೆಗೆ ಶ್ರೀ ಜಿ.ಆರ್ ವಕೀಲರನ್ನು ಭಾಷಾಂತರಕಾರರನ್ನಾಗಿ ನೇಮಿಸಲಾಯಿತು ಹಾಗೂ ಅವರಿಗೆ ಪ್ರಮಾಣ ವಚನ ಭೋದಿಸಲಾಯಿತು.

ದಿನಾಂಕಃ 14-02-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ 6 ರಿಂದ 8 ನೇ ಪ್ರತಿವಾದಿಯರ ಪರ ಶ್ರೀ ಎಂ.ಬಿ.ಪಿ ವಕೀಲರಿಂದಃ</u>**

ನಾನು ಈ ದಿನ ದೌಲತ್ ಬಾದ್ ನಿಂದ ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿ. ಈಗ 50 ವರ್ಷಗಳಿಂದ ನಾನು ದೌಲತಬಾದ್ ನಲ್ಲಿ ವಾಸವಾಗಿದ್ದೇನೆ. ನಾನು ದೌಲತಬಾದ್ ನಲ್ಲಿಯೇ ಮತದಾನ ಮಾಡುತ್ತೇನೆ ಎಂದರೆ ಸರಿ. ನಾನು ಸರ್ವೆ ನಂ.144, 552 ಹಾಗೂ 523 ರ ಜಮೀನುಗಳಿಗೆ ಸಂಬಧಿಸಿದಂತೆ ದಾವೆ ದಾಖಲು ಮಾಡಿದ್ದೇನೆ. ದಾವಾ ಆಸ್ತಿಗಳು ಮೂಲತಃ ನನ್ನ ತಾತನ ಹೆಸರಿನಲ್ಲಿ ಇದ್ದವು. ನನ್ನ ತಾತ ಬುಡ್ಡಪ್ಪ ತಂದೆ ಲಕ್ಷ್ಮಣ ರವರ ಹೆಸರಿನಲ್ಲಿ ಇದ್ದವು. ದಾವಾ ಅಸ್ತಿ ಪಹಣಿಗಳಲ್ಲಿ ನನ್ನ ತಾತನ ಹೆಸರು ಯಾವ ವರ್ಷದ ವರೆಗೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ತಾತನಿಗೆ ಲಕ್ಷ್ಮಮ್ಮ ಎಂಬ ಹೆಂಡತಿ ಇದ್ದರುಎಂದರೆ ಸಾಕ್ಷಿಯು ಲಕ್ಷ್ಮಮ್ಮ ಕಿರಿಯ ಹೆಂಡತಿ ಹಾಗೂ ನರಸಮ್ಮ ಹಿರಿಯ ಹೆಂಡತಿ ಆಗಿದ್ದರು ಎಂದು ನುಡಿಯುತ್ತಾರೆ. ಲಕ್ಷ್ಮಮ್ಮ ಒಬ್ಬರು ಮಾತ್ರ ನನ್ನ ತಾತನ ಹೆಂಡತಿ ಆಗಿದ್ದರು ಎಂದರೆ ಸರಿಯಲ್ಲ. ನಿಮ್ಮ ತಾತನಿಗೆ ಇಬ್ಬರು ಹೆಂಡತಿಯರು ಇದ್ದರು ಎಂಬುದನ್ನು ತೋರಿಸಲು ವಂಶಾವಳಿ ಪ್ರಮಾಣ ಪತ್ರ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ಹಾಜರು ಮಾಡಿದ್ದೇನೆ ಎಂದು ನುಡಿಯುತ್ತಾರೆ. ಆ ರೀತಿ ಯಾವುದೇ ದಾಖಲೆ ಹಾಜರು ಮಾಡದೇ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಾತನಿಗೆ ಲಕ್ಷ್ಮಮ್ಮ ಎಂಬ ಒಬ್ಬ ಹೆಂಡತಿ ಮಾತ್ರ ಇದ್ದರು ಹಾಗೂ 6 ರಿಂದ 8 ನೇ ಪ್ರತಿವಾದಿಯರು ಅವರ ಮಕ್ಕಳಾಗಿರುತ್ತಾರೆ ಎಂದರೆ ಸರಿಯಲ್ಲ.

2. ದಾವಾ ಅಸ್ತಿಗಳು ಮೂಲತಃ ಲಕ್ಷ್ಮಮ್ಮ ರವರ ಹೆಸರಿನಲ್ಲಿ ಇದ್ದವು ಹಾಗೂ ಅವರು 6 ರಿಂದ 8 ನೇ ಪ್ರತಿವಾದಿಯರಿಗೆ ನೊಂದಾಯಿತ ಹಕ್ಕು ಬಿಡುಗಡೆ ಪತ್ರ

ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿಯು 6 ರಿಂದ 8 ನೆ ಪ್ರತಿವಾದಿಯರು ನಮಗೆ ಸಂಬಂಧ ಇರುವುದಿಲ್ಲ ಎಂದು ನುಡಿಯುತ್ತಾರೆ. ಲಕ್ಷ್ಮಮ್ಮ ತಮ್ಮ ಜೀವಿತಾವದಿಯಲ್ಲಿ ಹೈದ್ರಾಬಾದಿನಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿಯು ಅವರು ಸಾಯುವ ಒಂದು ತಿಂಗಳ ಹಿಂದೆ ಅವರನ್ನು ಹೈದ್ರಬಾದಿಗೆ ಕರೆದುಕೊಂಡು ಹೋಗಿದ್ದರು ಅವರು ತೀರಿಕೊಂಡ ನಂತರ 6 ರಿಂದ 8 ನೇ ಪ್ರತಿವಾದಿಯರು ಅವರ ಮಕ್ಕಳು ಎಂದು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದರೆ ಎಂದು ನುಡಿಯುತ್ತಾರೆ. ದಿಃ 15.12.2021 ರಂದು ಲಕ್ಷ್ಮಮ್ಮ ಹಕ್ಕು ಬಿಡುಗಡೆ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಲಕ್ಷ್ಮಮ್ಮ ತೀರಿಕೊಂಡು ಈಗ ಮೂರು ವರ್ಷ ಆಗಿದೆ. 6 ರಿಂದ 8 ನೇ ಪ್ರತಿವಾದಿಯರು ಸುಳ್ಳು ದಾಖಲೆ ಸೃಷ್ಟಿಸಿಕೊಂಡಿರುವುದು ಗೊತ್ತಾದ ನಂತರ ನಾನು ದಾವೆ ದಾಖಲು ಮಾಡಿದ್ದೇನೆ. ಚಹಾ ಕುಡಿಯುವ ಹೊಟೇಲ್ ನಲ್ಲಿ ಜನ ಮಾತನಾಡುವುದನ್ನು ಕೇಳಿ ನನಗೆ ಗೊತ್ತಾಗಿತ್ತು.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ರೂ.500/- ಖರ್ಚಿನ ಮೇರೆಗೆ ಸಮಯ ನೀಡಿ ಮುಂದೂಡಲಾಗಿದೆ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ